ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 26-06-1970

*ಕಾಮಧೇನುವಿನ ಅರ್ಥ* (कामधेनु का अर्थ)

ತಮ್ಮನ್ನು ತಾವು ಸಾಕ್ಷಾತ್ಕಾರ ಮೂರ್ತಿಯೆಂದು ತಿಳಿಯುತ್ತೀರಾ? ಮೂರ್ತಿಯ ಬಳಿ ಏಕೆ ಹೋಗುತ್ತಾರೆ? ತಮ್ಮ ಮನದ ಕಾಮನೆಗಳನ್ನು ಪೂರ್ಣ ಮಾಡಿಕೊಳ್ಳಲು. ಯಾವುದೇ ಆತ್ಮನಲ್ಲಿ ಎಂಥದೇ ಕಾಮನೆಗಳನ್ನು ಪೂರ್ಣ ಮಾಡುವಂತಹ ಸಾಕ್ಷಾತ್ಕಾರ ಮೂರ್ತಿ ಆಗಿದ್ದೀರಾ? ಅಲ್ಪಕಾಲದಲ್ಲ, ಸದಾಕಾಲದ ಕಾಮನೆಗಳನ್ನು ಪೂರ್ಣ ಮಾಡಬಲ್ಲಿರಾ? ಕಾಮಧೇನು ಎಂದು ಮಾತೆಯರಿಗೆ ಹೇಳುತ್ತಾರಲ್ಲವೇ? ಕಾಮಧೇನುವಿನ ಅರ್ಥವಾಗಿದೆ ಸರ್ವಮನೋಕಾಮನೆಗಳನ್ನು ಪೂರ್ಣ ಮಾಡುವವರು. ಯಾರ ಸರ್ವಕಾಮನೆಗಳು ಪೂರ್ಣವಾಗಿರುತ್ತವೆಯೋ, ಅವರೇ ಬೇರೆಯವರ ಕಾಮನೆಗಳನ್ನು ಪೂರ್ಣ ಮಾಡಬಲ್ಲರು. ನೀವು ಸದಾ ಸರ್ವರ ಕಾಮನೆಗಳನ್ನು ಪೂರ್ಣ ಮಾಡುವ ಮೂರ್ತಿ ಆಗಬೇಕೆಂಬ ಗುರಿಯನ್ನಿಟ್ಟುಕೊಳ್ಳಿ, ಸರ್ವರ ಇಚ್ಛೆಯನ್ನು ಪೂರ್ಣ ಮಾಡುವವರು ಇಚ್ಛಾ ಮಾತ್ರಂ ಅವಿದ್ಯಾ (ಇಚ್ಛೆ ಎಂದರೆ ಏನು ಎಂದು ತಿಳಿಯದವರು) ಆಗಿರುತ್ತಾರೆ. ಈ ರೀತಿ ಅಭ್ಯಾಸ ಮಾಡಬೇಕು. ಪ್ರಾಪ್ತಿ ಸ್ವರೂಪರಾಗುವುದರಿಂದ ಬೇರೆಯವರಿಗೆ ಪ್ರಾಪ್ತಿ ಮಾಡಿಸಬಹುದು. ಆದ್ದರಿಂದ ಸದಾ ತಮ್ಮನ್ನು ದಾತಾ ಅಥವಾ ಮಹಾದಾನಿಯೆಂದು ತಿಳಿದುಕೊಳ್ಳಿ. ಮಹಾಜ್ಞಾನಿಯಾದ ಮೇಲೆ ಮಹಾದಾನಿಯ ಕರ್ತವ್ಯ ನಡೆಯುತ್ತದೆ. ಮಹಾದಾನಿ ಆಗುವುದರಿಂದ ಮಹಾಜ್ಞಾನಿಯ ಪರೀಕ್ಷೆ ಆಗುತ್ತದೆ. ಸುತ್ತಾಡುವುದು ಹಿಡಿಸುತ್ತದೆಯೇ? ಯಾರಿಗೆ ಇದರ ಅಭ್ಯಾಸವಿದೆಯೋ ಅವರು ಸುತ್ತಾಡಿ ಕೊಂಡಿರುತ್ತಾರೆ. ಇಲ್ಲಿಯೂ ಅದೇ ರೀತಿ ಯಾರು ಎಷ್ಟು ಸುತ್ತಾಡುತ್ತಾರೆಯೋ ಅವರು ಅಷ್ಟು ಬೇರೆಯವರನ್ನು ಬುದ್ಧಿಯೋಗದಿಂದ ಸುತ್ತಾಡಿಸುತ್ತಾರೆ. ತಮ್ಮಿಂದ ಸಾಕ್ಷಾತ್ಕಾರ ಆಗಬೇಕು. ಹೇಗೆ ಸಾಕಾರ ರೂಪದ ಮುಂದೆ ಬಂದಾಗ ಪ್ರತಿಯೊಬ್ಬರಿಗೂ ಅವರ ಭಾವನೆಗನುಸಾರ ಸಾಕ್ಷಾತ್ಕಾರದ ಅನುಭವವಾಗುತ್ತಿತ್ತು. ಅದೇ ರೀತಿ ತಮ್ಮಿಂದ ಕ್ಷಣಕ್ಷಣಕ್ಕೂ ಅನೇಕ ಅನುಭವ ಅಥವಾ ಸಾಕ್ಷಾತ್ಕಾರವಾಗುವುದು. ಹೀಗೆ ದರ್ಶನೀಯ ಮೂರ್ತಿ ಅಥವಾ ಸಾಕ್ಷಾತ್ಕಾರ ಮೂರ್ತಿ ಅವ್ಯಕ್ತ ಆಕೃತಿ ರೂಪ ತೋರಿಸಿದಾಗ ಆಗುವಿರಿ, ಯಾರೇ ಎದುರಿಗೆ ಬಂದರೂ ಅವರಿಗೆ ಶರೀರ ಕಂಡು ಬರದೇ ಕೇವಲ ಸೂಕ್ಷ್ಮ ವತನದಲ್ಲಿಯ ಪ್ರಕಾಶಮಯ ರೂಪ ಕಂಡುಬರಬೇಕು. ಕೇವಲ ಮಸ್ತಕದ ಪ್ರಕಾಶವಲ್ಲ ಆದರೆ ಇಡೀ ಶರೀರದಿಂದ ಪ್ರಕಾಶದ ಸಾಕ್ಷಾತ್ಕಾರವಾಗುವುದು, ಯಾವಾಗ ಪ್ರಕಾಶವೇ ಪ್ರಕಾಶವನ್ನು ನೋಡುವರೋ ಆಗ ಸ್ವಯಂ ಪ್ರಕಾಶ ರೂಪವಾಗುವರು.

ಅವ್ಯಕ್ತ ಮುರಳಿ 26-06-1970.

***ಕಾಮಧೇನುವಿನ ಅರ್ಥ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸಾಕ್ಷಾತ್ಕಾರ ಮೂರ್ತಿ.

2. ಇಚ್ಛೆ ಎಂದರೆ ಏನು ಎಂದು ತಿಳಿಯದ ನಾನು (ಇಚ್ಛಾ ಮಾತ್ರಂ ಅವಿದ್ಯಾ) ಸರ್ವರ ಇಚ್ಛೆಗಳನ್ನು ಪೂರ್ಣ ಮಾಡುವ ಕಾಮಧೇನು ಆಗಿದ್ದೇನೆ.

3. ನಾನು ಪ್ರಾಪ್ತಿ ಸ್ವರೂಪವಾಗಿ ಇತರರಿಗೆ ಪ್ರಾಪ್ತಿಯನ್ನು ಕೊಡುವ ವರದಾನಿ ಮತ್ತು ಮಹಾದಾನಿ.

4. ನಾನು ಬುದ್ಧಿ ಯೋಗದಿಂದ ವಿಹರಿಸುವ (ಸುತ್ತಾಡುವ) ಸಾಕ್ಷಾತ್ಕಾರ ಮೂರ್ತಿ.

5. ನಾನು ಅವ್ಯಕ್ತ ಆಕೃತಿ ರೂಪವನ್ನು ತಯಾರಿಸಿಕೊಂಡಿರುವ ದರ್ಶನೀಯ ಮೂರ್ತಿ.

6. ನನ್ನ ಪ್ರಕಾಶ ರೂಪದಿಂದ ಇತರರು ಕೂಡ ಪ್ರಕಾಶ ರೂಪವಾಗಿ ತಯಾರಾಗಿದ್ದಾರೆ.